# ರಾಮಕೃಷ್ಣರು ಮನೆಗೆ ಬಂದರು ಬಾಗಿಲು ತೆರೆಯಿರೆ

1. **Ref.:** Shri Purandara Dasara Sahitya Part – 4, Krishna Leela, edited by Shri Betageri Krishna Sharma and Shri Bengeri Huchha Rayaru, page No. 01.
2. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 76.
3. **Note:** The lyrics given without highlights are as per Ref. 2. The lyrics given in yellow highlights are as per Ref. 1.
4. **Ref.:** Dasara Padagalu – Purandara Dasara Keerthane, Vol 2, Edited by Shri Pavanje Gururao, Sriman Madhwa Siddantha Granthalaya, Udupi, page No. 44. Here, the wordings are slightly different and are not considered here. The Ankita mentioned here is “guru purandara vittala”.
5. **Note:** Singer has followed lyrics as in Ref. 2. But, he has taken the Ankita as in Ref. 4.
6. **Note:** Ankita in Ref. 1 and Ref. 2 are same. But, in Ref. 4, the Ankita is different. It is “guru purandara vittala” and this is sung by many singers. We have considered Ref. 1 as standard and taken that Ankita for listing.

| | |
|---|---|
| ರಾಗ: ಜಂಜೂಟಿ ತಾಳ: ಆದಿ | ರಾಗ: ಜಿಂಜೋಟಿ ತಾಳ: ರೂಪಕ |
| ರಾಮಕೃಷ್ಣರು ಮನೆಗೆ ಬಂದರು ಬಾಗಿಲು ತೆರೆಯಿರೆ ॥ ಪ ॥ | ರಾಮಕೃಷ್ಣರು ಮನೆಗೆ ಬಂದರು ಬಾಗಿಲು ತೆರೆಯಿರೊ |
| ಕಾಮಧೇನು ಬಂದಂತಾಯಿತು ವರವ ಬೇಡಿರೆ ॥ ಅಪ ॥ | ಕಾಮಧೇನು ಬಂದಂತಾಯಿತು ಸುಖವ ಸುರಿಯಿರೊ |
| ಚೆಂಡು ಬುಗುರಿ ಚಿಣ್ಣಿ ಕೋಲು ಗಜ್ಜುಗವಾಡುತ | ಮಕರ ಕುಂಡಲ ನೀಲ ಮುತ್ತಿನ ಚೌಕಳಿ ಇಡುತಲಿ |
| ದುಂಡು ಮಲ್ಲಿಗೆ ಮುಡಿದು ಕೊಳಲನೂದಿ ಪಾಡುತ | ಸುಕುಮಾರ ಸುಂದರವಾದ ಉಡಿಗೆಯುಡುತಲಿ |
| ಹಿಂಡುವೆಣ್ಣಳ ಮುದ್ದು ಮುಖದ ಸೊಬಗ ನೋಡುತ | ಮುಖದ ಕಮಲ ಮುಗುಳು ನಗೆಯ ಸುಖವ ಕೊಡುತಲಿ |
| ಭಂಡು ಮಾಡಿ ಬಾಲೆಯರೊಡನೆ ಸರಸವಾಡುತ ॥ ೧ ॥ | ಕಂಕಣ ಹಾರ ತೋಳಬಂದಿ ತೊಡಿಗೆ ತೊಡುತಲಿ |
| ಮಕರ ಕುಂಡಲ ನೀಲ ಮುತ್ತಿನ ಬಾವುಲಿಡುತಲಿ | ಚೆಂಡು ಬುಗುರಿ ಚಿಣ್ಣಿ ಕೋಲು ಗಜುಗವಾಡುತ |
| ಕಂಕಣ ಹಾರ ತೋಳಬಂದಿ ತೊಡಿಗೆ ತೊಡುತಲಿ | ದುಂಡು ಮಲ್ಲಿಗೆ ತುರುಬಿ ಕೊಳಲನೂದಿ ಪಾಡುತ |
| ಸುಕುಮಾರ ಸುಂದರವಾದ ಉಡಿಗೆ ಉಡುತಲಿ | ಮಿಂಡೆವೆಂಗಳ ಮುದ್ದು ಮುಖದ ಸೊಗವ ನೋಡುತ |
| ಮುಖದ ಕಮಲ ಮುಗುಳು ನಗೆಯ ಸುಖವ ಕೊಡುತಲಿ ॥ ೨ ॥ | ಭಂಡು ಮಾಡಿ ಭಾಮೆಯರೊಡನೆ ಸರಸವಾಡುತ |
| ಪೊಕ್ಕುಳಲಿ ಅಜನ ಪಡೆದ ದೇವ ದೇವನು | ಪೊಕ್ಕುಳಲಿ ಅಜನ ಪಡೆದ ದೇವ ದೇವನು |

| | |
|---|---|
| ಚಿಕ್ಕ ಅಂಗುಷ್ಟದಲಿ ಗಂಗೆಯ ಪಡೆದನು | ಚಿಕ್ಕ ಉಂಗುಟದಿ ಗಂಗೆಯ ಪಡೆದನಾತನು |
| ಮಕ್ಕಳ ಮಾಣಿಕ್ಯನವ ಪುರಂದರ ವಿಠಲನು | ಮಕ್ಕಳ ಮಾಣಿಕ್ಯ ಪುರಂದರ ವಿಠಲ ರಾಯನು |
| ಅಕ್ಕರೆಯಿಂದಲಿ ಮುಕುತಿ ಕೊಡುವ ರಂಗನಾಥನು ॥ ೩॥ | ಭಕ್ತ ಜನರಿಗೊಲಿದ ನೀನು ಮುಕ್ತಿದಾತನು |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು: 22 no.**

ಈ ಹಾಡಿನಲ್ಲಿ ಬಲರಾಮ-ಕೃಷ್ಣರು ಮನೆಗೆ ಬಂದಿದ್ದಾರೆ. ಬಾಗಿಲು ತೆರೆಯಿರಿ ಎಂಬ ಬಗೆಯನ್ನು ಪರಿಪೋಷಿಸಲಾಗಿದೆ. ಕೃಷ್ಣ ಲೀಲೆಗೆ ಈ ಕೀರ್ತನೆಯನ್ನು ನಾವು ಮಂಗಳಾಚರಣದಂತೆ ಬಳಸಿಕೊಂಡಿದ್ದೇವೆ. (ಇದು Ref. 1 ಯಿಂದ ತೆಗೆದುಕೊಂಡಿದ್ದು).

ಆದರೆ Ref. 2 ನಲ್ಲಿ ಈ ರೀತಿಯಿದೆ :- 'ಬಾಲಕೃಷ್ಣನು ಮನೆಗೆ ಬಂದನು' ಎಂದು ಪಾಠಾಂತರವಿದೆ. ಇದೇ ಸರಿಯಾದುದೆಂದು ತೋರುತ್ತದೆ. ಆದರೆ ಬಹುಮಟ್ಟಿಗೆ ಮುದ್ರಿತ ಸಂಕಲನಗಳಲ್ಲಿ 'ರಾಮಕೃಷ್ಣರು ಮನೆಗೆ ಬಂದರು' ಎಂದೇ ಇದೆ. ಪದದಲ್ಲಿರುವ ಒಕ್ಕಣೆಯೆಲ್ಲ ಕೃಷ್ಣನೊಬ್ಬನನ್ನು ಕುರಿತದ್ದೇ.

ಯಾವುದು ಸರಿಯೆಂದು ಸಂಶೋಧಕರು ತಿಳಿಸಬೇಕು.

**ಮಕರ ಕುಂಡಲ** = ಮೊಸಳೆಯಾಕಾರದ ಕುಂಡಲ

**ನೀಲ ಮುತ್ತು** = ನೀಲ ಮತ್ತು ಮುತ್ತುಗಳು

**ಸುಖ** = ಆನಂದ

**ತುರುಬಿ** = ಧರಿಸಿಕೊಂಡು

**ಮಿಂಡೆ** = ಹರಯದ ಹೆಂಗಸು

**ಭಂಡು** = ಚೇಷ್ಟೆಯಿಂದ ಸಾಕುಸಾಕೆನಿಸುವುದು

**Classification:** Keerthane
**Ankita:** purandara vittala
**Location:** NA
**Category:** Krishna Leela
**Sub-Category:** Krishna, rama, Balarama, kamadhenu, ATa, bandhu, abharana, padma, brahma, gange, deva, ranga, mukti, hennu, kolalu, makkalu, bagilu
**Pravachana:** NA
**Explanation:** NA